5C.R.P.67

| |
|---|
| Form No.4 (Civil)<br>Deposition Sheets<br>(R.P.No.57) |

1 ನೇ ಅಪರ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ.  73/2022

ದಿನಾಂಕ ಃ 16.07.2025  ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 11 ಪಿ. ಡಬ್ಲ್ಯೂ:12

| | |
|---|---|
| ಸಾಕ್ಷಿದಾರರ ಹೆಸರು | ಮಹೇಶ್ವರಿ |
| ಗಂಡನ ಹೆಸರು | ಸುರೇಂದ್ರ ಕುಮಾರ |
| ವಯಸ್ಸು | 40 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ಚಾಚನಹಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ  ಸರ್ಕಾರಿ ಅಭಿಯೋಜಕರಿಂದಃ**

1. ಮೃತೆ ಮಧುಮಾಲಿನಿ ಗೊತ್ತು. ಸದರಿ ಮಧುಮಾಲಿನಿ  5 ವರುಷದ ಹಿಂದ ಅಕ್ಟೋಬರ್ ತಿಂಗಳಲ್ಲಿ ತೀರಿಕೊಂಡಿರುತ್ತಾಳೆ. ಆಕೆಯ ಶವವನ್ನು ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ನೋಡಿರುತ್ತೇನೆ.  ಆಕೆಯ ಶವವನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ  ನಂತರ ತಂದಿದ್ದರು. ಮಂಡ್ಯದ ಮಿಮ್ಸ್  ಆಸ್ಪತ್ರೆ ಶವಾಗಾರದಲ್ಲಿ ಸದರಿ ಮಧುಮಾಲಿನಿಯ ಶವವನ್ನು ನೋಡಿರುತ್ತೇನೆ. ಸದರಿ  ಸಮಯದಲ್ಲಿ ವೈದ್ಯರು, ಇನ್ನಿಬ್ಬರು ವ್ಯಕ್ತಿಗಳು  ಹಾಗೂ ಒಬ್ಬರು ಮಹಿಳೆ ಇದ್ದರು.  ಸದರಿ  ಮಧುಮಾಲಿನಿಯ ಶವದ  ಮೇಲೆ ಇದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ.
2. ನಾನು  ಮಧುಮಾಲಿನಿಯ ಶವವನ್ನು ನೋಡಿದಾಗ ಆಕೆಯ ಎಡಭಾಗ ಗಲ್ಲದ ಕೆಳಭಾಗದಲ್ಲಿ ತರಚಿದ ಗಾಯವಿತ್ತು, ಬಲಗೈ ನಲ್ಲಿ ಗೀರು ಇತ್ತು, ಎಡಗೈನ ಮೊಣಕೈನ ಕೆಳಭಾಗದಲ್ಲಿ ಕಪ್ಪ ಹಾಗೂ ಹಸಿರು ಗಾಯದ  ಕಲೆ ಇತ್ತು, ಎಡಗಾಲಿನ ಮಂಡಿಯ ಕೆಳಭಾಗದಲ್ಲಿ ಕಪ್ಪ ಹಾಗೂ ಹಸಿರು ಬಣ್ಣಗಟ್ಟಿತ್ತು, ಕುತ್ತಿಗೆಯ ಸುತ್ತ  ಕೆಂಪು ಬಣ್ಣದ ಗುರುತು ಇತ್ತು.  ವೈದ್ಯರು  ಶವವನ್ನು ಪರಿಶೀಲನೆ  ಮಾಡಿದರು. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ, ಸದರಿ ಪೋಟೋದಲ್ಲಿ ಮಧುಮಾಲಿನಿಯ ಶವ ಇದೆ ಎಂದು ಗುರುತಿಸಿರುತ್ತಾರೆ. ಸದರಿ

ಫೋಟೋದಲ್ಲಿ ತಾನು, ಮಹಿಳಾ ಪೊಲೀಸರು ಹಾಗೂ 3 ಜನ ಹುಡುಗರು ಇದ್ದಾರೆ ಎಂದು ಸಾಕ್ಷಿಯು ಗುರುತಿಸಿರುತ್ತಾರೆ.

(ಸದರಿ ಫೋಟೋದ ಬಗ್ಗೆ ಕಲಂ 65(ಬಿ) ಸಾಕ್ಷ್ಯ ಅಧಿನಿಯಮದ ಪ್ರಮಾಣ ಪತ್ರವನ್ನು ಸಲ್ಲಿಸದೇ ಇರುವುದರಿಂದ, ಸದರಿ ಫೋಟೋ ವನ್ನು ನಿಶಾನೆಯಾಗಿ ಗುರುತಿಸಿಲ್ಲ).

3. ಗಲಾಟೆಯಾಗಿ , ಮಧುಮಾಲಿನಿಗೆ ಆಕೆಯ ಗಂಡ ಹೊಡೆದಿದ್ದರೆಂದು, ಆ ಕಾರಣದಿಂದ ಆಕೆ, ನೇಣು ಹಾಕಿಕೊಂಡಿದ್ದಾಳೆ ಎಂದು ನನಗೆ ಗೊತ್ತಾಗಿರುತ್ತದೆ. ಮಧುಮಾಲಿನಿಯು, ವಡ್ಡರಹಳ್ಳಿಯಲ್ಲಿ ಇರುವ ಆಕೆಯ ಗಂಡನ ಮನೆಯಲ್ಲಿ ನೇಣು ಹಾಕಿಕೊಂಡಿದ್ದಳು. ಹಣದ ವಿಚಾರದಲ್ಲಿ , ಮಧುಮಾಲಿನಿಯ ಗಂಡ ಮತ್ತು ಮಧುಮಾಲಿನಿ ಗೆ ಗಲಾಟೆಯಾಗಿತ್ತೆಂದು ಗೊತ್ತಾಗಿರುತ್ತದೆ. ಸದರಿ ಮಧುಮಾಲಿನಿಯ ಶವ ಪರೀಕ್ಷೆಯಾದ ನಂತರ ನನ್ನ ಸಹಿಯನುಜ್ಞ ಪಡೆದಿರುತ್ತಾರೆ. ಸದರಿ ಶವ ಪಂಚನಾಮೆಯಲ್ಲಿ ಇರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಶವ ಪಂಚನಾಮೆಯನ್ನು ನಿಪಿ.22 ಎಂದು, ಸಾಕ್ಷಿಯ ಸಹಿಯನ್ನು ನಿಪಿ.22(ಎ) ಎಂದು ಗುರುತಿಸಲಾಯಿತು.

4. ಸದರಿ ಶವ ಪಂಚನಾಮೆಯನ್ನು ದಿಃ 05.10.2020 ರಂದು ಬೆಳಗ್ಗೆ 8.30 ರಿಂದ 12.00 ಗಂಟೆಯ ನಡುವಿನಲ್ಲಿ ಮಾಡಲಾಗಿರುತ್ತದೆ. ಸಾಕ್ಷಿಯು ಮುದ್ದೆಮಾಲು.2 ರಿಂದ 5 ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಂ ಎಂ ವಕೀಲರಿಂದಃ</u>**

5. ನನ್ನ ಗಂಡನ ಮನೆ ಮತ್ತು ತವರು ಮನೆ, ಒಂದೇ ಊರಿನಲ್ಲಿ ಇರುತ್ತದೆ. ಫ್ರಾಸಾ. 3 ರವರು ನನ್ನ ದೂರದ ಸಂಬಂಧಿ. ನಮ್ಮ ಊರಿನಿಂದ ವಡ್ಡರಹಳ್ಳಿಯು, 2 ರಿಂದ 3 ಕಿಮೀ ದೂರ ಇರುತ್ತದೆ. ಸದರಿ ಮಧುಮಾಲಿನಿಯ ಮದುವೆಗೆ ನಾನು ಹೋಗಿದ್ದೆನು. ವಡ್ಡರಹಳ್ಳಿಯಲ್ಲಿ ಇರುವ ನನ್ನ ಅಕ್ಕನ ಮನೆಗೆ ಹೋದಾಗ, ಮಧು ಮಾಲಿನಿಯ ಮನೆಗೆ ಭೇಟಿ ನೀಡಿರುತ್ತೇನೆ. ಮದುವೆಯಾದ ನಂತರ ಮಧುಮಾಲಿನಿ ಹಾಗೂ ಆಕೆಯ ಗಂಡ ಚೆನ್ನಾಗಿ ಇದ್ದರು. ಮಧು ಮಾಲಿನಿಯ ಮನೆಗೆ ನಾನು ಒಂದೆರಡು ಬಾರಿ ಭೇಟಿ ನೀಡಿದ್ದೆನು. ಸದರಿ ಸಮಯದಲ್ಲಿ ಮಧು ಮಾಲಿನಿಯು, ಏನು ಹೇಳಿಲ್ಲ.

6. ಆಸ್ಪತ್ರೆಗೆ ಮಧು ಮಾಲಿನಿಯ ಶವವನ್ನು ತಂದಿದ್ದಾಗ ಆಕೆಯ ಮರಣದ ಬಗ್ಗೆ ನನಗೆ ಗೊತ್ತಾಗಿರುತ್ತದೆ. ಮಧು ಮಾಲಿನಿ ತೀರಿಕೊಂಡ ನಂತರ ಮೊದಲ ಬಾರಿಗೆ ಮಳವಳ್ಳಿ ಆಸ್ಪತ್ರೆಯಲ್ಲಿ ಆಕೆಯ ಶವವನ್ನು ನೋಡಿರುತ್ತೇನೆ. ಮಧು ಮಾಲಿನಿಯ ಶವವನ್ನು ಬೆಳಗ್ಗೆ 7

ರಿಂದ 7.30 ಗಂಟೆ ಸಮಯದಲ್ಲಿ ನೋಡಿದ್ದೆನು. ಸದರಿ ಸಮಯದಲ್ಲಿ ಫ್ರಾಸಾ. 3 ರವರು ಹಾಗೂ ಅವರ ಕುಟುಂದವರು ಸದರಿ ಆಸ್ಪತ್ರೆಯಲ್ಲಿ ಇದ್ದರು. ಆಗ ಮರಣೋತ್ತರ ಪರೀಕ್ಷೆ ಇನ್ನೂ ನಡೆದಿರಲಿಲ್ಲ. ನಿಪಿ.22 ಶವ ಪಂಚನಾಮೆಗೆ ಮಿಮ್ಸ್ ಮಂಡ್ಯದಲ್ಲಿ ಸಹಿ ಮಾಡಿರುತ್ತೇನೆ. ನಾನು ಆ್ಯಂಬುಲೆನ್ಸ್ ನಲ್ಲಿ ಮಿಮ್ಸ್ ಆಸ್ಪತ್ರೆ ಗೆ ಬಂದಿರುತ್ತೇನೆ. ಮಧುಮಾಲಿನಿಯ ಶವದ ಮೇಲೆ, ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದ ಗಾಯಗಳನ್ನು ನೋಡಿದ್ದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಮಧುಮಾಲಿನಿಯ ಶವವನ್ನು ನೋಡದೇ ಇದ್ದರು ಸಹ ಫ್ರಾಸಾ.3 ಮತ್ತು ಅವರ ಕುಟುಂಬದವರು ನನ್ನ ಸಂಬಂಧಿಗಳಾಗಿದ್ದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಧುಮಾಲಿನಿ ತೀರಿಕೊಂಡ ನಂತರ ಮೊದಲ ಬಾರಿಗೆ, ಆಕೆಯ ಶವದ ಅಂತ್ಯ ಸಂಸ್ಕಾರ ಸಮಯದಲ್ಲಿ ನೋಡಿದ್ದೆನು ಎಂದರೆ ಸರಿಯಲ್ಲ. ಮುಮಾ.1 ರಿಂದ 5 ಬಟ್ಟೆಗಳನ್ನು ನಾನು ನೋಡಿದ್ದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.